ಅಂತ ಸಂಕಪ್ಪನಿಗೆ ಮಮ್ಮಲ ಮರುಗದೇ ಇರಲಿಲ್ಲ. ಅವರಾಡುವ ಮಾತಿಗೆ ಹೇಗೆ ಪ್ರತಿಕ್ರಿಯಿಸಬೇಕು, ಸಮರ್ಥಿಸಿಕೊಳ್ಳಬೇಕು ಎನ್ನುವ ಗೊಂದಲದಲ್ಲಿಯೇ ಸಂಕಪ್ಪ ಎಲ್ಲಾ ಮಾತಿಗೆ ಅಲ್ಲದಿದ್ದರೂ ಕೆಲ ಮಾತಿಗೆ ತುಂಡುತುಂಡು ಉತ್ತರವೆಸೆದು ಸುಮ್ಮನಿದ್ದ. ಅವನ ಮಾನಸಿಕ ಹೊಯ್ದಾಟವನ್ನು ಅರ್ಥೈಸಿಕೊಂಡ ಜನ ಅವನನ್ನ ಮತ್ತೆಮಾತಿಗೆ ಆಹ್ವಾನಿಸಲಿಲ್ಲ. ಅವನಿಗೆ ಸಂಬಂಧಿಸಿದ ಯಾವ ಮಾತೂ ಆಡಲಿಲ್ಲ. ಟಮ್ ಟಮ್ ಹಾವೇರಿಯಿಂದ ಹೊರಟು ಕಳಸಾಪುರ ತಲುಪುತ್ತಲೇ ಕೆಲವರು ಸಂಕಪ್ಪನ ದುಬ್ಬ ಸವರುತ್ತಾ ಅಷ್ಟಿಷ್ಟು ಧೈರ್ಯ ಹೇಳಿ ಟಮ್‌ಟಮ್‌ನಿಂದ ಇಳಿದು ತಂತಮ್ಮ ಮನೆಗೆ ಹೋದರು. ಸಂಕಪ್ಪ ಮಾತ್ರ ತನ್ನ ಮನೆಗೆ ಹೋಗದೇ ಮೂಲಿಮನಿ ಶೆಟ್ಟರ ಮನೆಯ ಹಾದಿ ಹಿಡಿದ.

ಶೆಟ್ಟರ ಮನೆ ಇನ್ನೂ ಒಂದು ಫರ್ಲಾಂಗು ಇದೆ ಅನ್ನುವಾಗಲೇ ಸಂಕಪ್ಪ 'ಶೆಟ್ರ... ಶೆಟ್ರ...' ಅಂತ ಕೂಗಿ ಮನೆ ತಲುಪಿದ. ಮತ್ತೊಮ್ಮೆ ಕೂಗುತ್ತಾ ಇನ್ನೇನು ಹೊಸ್ತಿಲ ದಾಟುವುದರಲ್ಲಿ ಸ್ವತಃ ಶೆಟ್ಟರೇ 'ಬಾಪ್ಪಾ ಬಾ... ನಿಂದಾ ಹಾದಿ ಕಾಯಕತ್ತಿದ್ನಿ ನೋಡ. ಹ್ಯಾಂಗದಾಳ ಮಗಳು? ಅರಾಮ ಅದಾಳಿಲ್ಲೋ?' ಅಂತ ಅಡರಾಯಿಸಿ ಮಾತಾಡಿಸಿದರು. ಆ ಕ್ಷಣಕ್ಕೆ ಸಂಕಪ್ಪ ಪ್ರತಿಕ್ರಿಯಿಸಲಿಲ್ಲ. ಅವನ ವರ್ತನೆಯನ್ನ ಕಂಡ ಶೆಟ್ಟರೊಳಗೆ ಆತಂಕ ಹುಟ್ಟಿ ಅವರ ಮುಖದ ಮೇಲೆ ಅದರ ಛಾಯೆ ಮೂಡುತ್ತಲೇ ಸಂಕಪ್ಪ ಬಾಯಿತೆಗೆದ.

'ಆರಾಮ ಅನ್ನೂದಷ್ಟ ಖರೇರಿ. ಡಾಕ್ಟರ್ ಇನ್ನೂ ಗ್ಯಾರಂಟಿ ಕೊಟ್ಟಿಲ್ಲ' ಅಂದು ಮುಸಿಮುಸಿ ದುಃಖಿಸುತ್ತಾ 'ಶೆಟ್ರ ನೀವ ನಮ್ಮನ್ ಕಾಪಾಡಬೇಕ್ರಿ' ಅಂದು ಏಕದಂ ಅವರ ಕಾಲಿಗೆ ಎರಗಿದ.

'ಏಳೇಳ... ಮರಣಾ, ಮಾರಾಟ ನಮ್ಮ ಕೈಯ್ಯಾಗಿಲ್ಲ. ದೇವ್ರ ಕೈಯ್ಯಾಗೈತಿ. ಅಂವ್ನ ಮ್ಯಾಲೆ ಭಾರಾ ಹಾಕೂಣೇಳ' ಅಂತ ಶೆಟ್ಟರು ಅವನನ್ನ ಭುಜ ಹಿಡಿದು ಮೇಲಕ್ಕೆತ್ತುತ್ತಲೇ 'ಅಲ್ಲ... ಯಶೋದಿ ಚೊಲೋನ ಇದ್ಲ... ವಿಷಾ ತುಗೊಳುವಂಥದ್ದ ಏನಾಗಿತ್ತಂತ ಅಕಿಗೆ?' ಕಳವಳದಿಂದ ಪ್ರಶ್ನಿಸಿದರು.

'ದೇವ್ರ ಬಲ್ಲ' ಅಂತ ಕೆಳದುಟಿ ಮಾಡಿ ಎರಡೂ ಕೈಯನ್ನು ಪ್ರಶ್ನಾರ್ಥಕ ರೀತಿಯಲ್ಲಿ ನುಲಿಸಿ ಸಂಕಪ್ಪ ಉಸುರಿದ.



'ಅಲ್ಲೋ... ನೀವ ಕಿಮ್ಸನ್ಯಾಗ ಅಡ್ಮಿಟ್ ಮಾಡ್ಬೇಕಿಲ್ಲೋ... ಅಲ್ಯಾಕ್ಹೋಗಿ ಖಾಸಗಿ ದವಾಖಾನಿಗೆ. ಕಂಡಾಪಟಿ ಖರ್ಚ ಅಲ್ಲಿ' ಅಂದರು.

'ಹೊಟ್ಯಾಗ ಕೂಸಯಿತ್ತಲ್ರಿ... ಅದಕ್ ಗೌರ್ಮೆಂಟ್ ದವಾಖಾನ್ಯಾಗ ದಾದ ಮಾಡೂದಿಲ್ಲಂತ ಅಲ್ಲಿ ಹೋದ್ವಿ' ಅಂತ ಅಕ್ಕಳಸಿ ಅಂದ. ಶೆಟ್ಟರು ಮತ್ತೇ ಮಾತಿಗಿಳಿಯಲಿಲ್ಲ. ಸ್ವಲ್ಪ ಹೊತ್ತು ತಡೆದು ಬಿಸಿಬಿಸಿ ಉಪ್ಪಿಟ್ಟು, ಚಹಾಪಾನೀಯ ಕೊಟ್ಟು ಉಪಚರಿಸಿದರು. ಅವನು ಬೇಡಿಕೆಯಿಟ್ಟಿದ್ದ ಐವತ್ತು ಸಾವಿರ ಹಣದಲ್ಲಿ ಇಪ್ಪತ್ತು ಸಾವಿರ ಮಾತ್ರ ಕೊಟ್ಟು ಇನ್ನುಳಿದಿದ್ದನ್ನು ಹೊಲದ ಪತ್ರಗಳನ್ನು ಅಡವಿಟ್ಟ ಮೇಲೆಯೇ ಕೊಡುವುದಾಗಿ ಹೇಳಿ ಕಳುಹಿಸಿದರು.

ಮುಳುಗುವ ಹಡಗಿಗೆ ಹುಲ್ಲುಕಡ್ಡಿಯೇ ಆಸರೆ ಎಂಬಂತೆ ಸಿಕ್ಕ ಇಪ್ಪತ್ತು ಸಾವಿರಕ್ಕೇ ಸಂಕಪ್ಪ ಸಂತೃಪ್ತನಾಗಿದ್ದ. ನಾಳೆನಾಡಿದ್ದರಲ್ಲಿ ಸವಡು ಮಾಡಿಕೊಂಡು ಹೊಲದ ಪತ್ರಗಳನ್ನ ತಲುಪಿಸಿ ಆ ಮೂವತ್ತು ಸಾವಿರವನ್ನು ಪಡೆಯುವುದರೆಡೆಗೆ ವಿಚಾರ ಕೇಂದ್ರಿಕರಿಸಿ ತನ್ನ ಮನೆಯತ್ತ ಸಾಗಿದ.

ಶೆಟ್ಟರ ಮನೆಯಿಂದ ತನ್ನ ಮನೆಗೆ ಹೋಗುವ ದಾರಿಯಲ್ಲಿ ಎದುರಿಗೆ ಬಂದವರಿಗೆಲ್ಲಾ ಅನುತನು ಮಾತುಗಳನ್ನು ವಿನಿಮಯಿಸುತ್ತಾ, ನೆತ್ತಿ ಸುಡುತ್ತಿದ್ದ ಬಿಸಿಲು ಸಹಿಸುತ್ತಾ ಸಣ್ಣಗೆ ಹೆಜ್ಜೆವೂರುತ್ತಿದ್ದ ಸಂಕಪ್ಪ. ಇನ್ನೇನು ಫರ್ಲಾಂಗು, ಅರ್ಧಫರ್ಲಾಂಗ